# ಮುಕುಂದೂರು ಸ್ವಾಮಿಗಳು

ಡಿ.ಕೆ. ಈರೇಗೌಡ

ಮುಕುಂದೂರು ಸ್ವಾಮಿಗಳನ್ನು ಅಳೆಯುವುದಾಗಲಿ, ಅರಿಯುವುದಾಗಲಿ ಆಗದ ಮಾತು. ಅವರಿಗೆ ಶರಣಾಗಿ, ಮೌನಿಯಾಗಿ ಅವರಾಡಿರುವ ಮಾತುಗಳನ್ನು ನೆನೆಯುವುದೇ ಲೇಸು. ಅವರಾಡಿರುವ ಮಾತುಗಳು ಕೇವಲ ಶಬ್ದಗಳಲ್ಲ. ಸತ್ಯಾನ್ವೇಷಣೆಯ ಆಗೆತದಲ್ಲಿ ಕಂಡ ಅನುಭಾವದ ನುಡಿಗಳು. ಸೃಷ್ಟಿರಹಸ್ಯದ ಬೇರುಗಳನ್ನು ಭೇದಿಸುವಾಗ ಹೊರಟ ಉದ್ಗಾರಗಳು. ಆ ಮಾತುಗಳು ಎಷ್ಟೊಂದು ನೇರ ! ಎಷ್ಟೊಂದು ಸರಳ ! ಶಾಸ್ತ್ರಗಳು, ಉದ್ಗ್ರಂಥಗಳು ವಿವರಿಸಲಾಗದ ಭಗವದ್ ವಿಚಾರಗಳನ್ನು ಎಷ್ಟು ಸರಾಗವಾಗಿ ತಿಳಿಹೇಳಿದ್ದಾರೆ – ತಮ್ಮ ಬಳಿ ನೆರೆದವರಿಗೆ ! ಅವರ ಮಾತುಗಳಲ್ಲಿರುವ ನಿಜದ ಒಳಹೊಳಹನ್ನು, ಅವರಿಗೆ ಮಾನವೀಯತೆಯ ಬಗ್ಗೆ ಇದ್ದ ಅಖಂಡ ಪ್ರೀತಿಯನ್ನು ಅನುಭವಿಸಿಯೇ ಅರಿಯಬೇಕು.

## ಸರಳ ಬದುಕಿನ ವಿರಳ ಜೀವನ

ಋಷಿಯ ಮೂಲ ನದಿಯ ಮೂಲ ಹುಡುಕಬಾರದು ಎಂಬ ಗಾದೆಯೊಂದುಂಟು . ಒಂದು ವೇಳೆ ಹುಡುಕುವ ಪ್ರಯತ್ನಮಾಡಿದರೆ 'ಶೂನ್ಯ'ವೇ ಅವರಿಗೆ ಉತ್ತರವಾದೀತು. ಈ ಮಾತಿಗೆ ಮುಕುಂದೂರು ಸ್ವಾಮಿಗಳೇ ನಿದರ್ಶನ. ಅವರು ಹೆಸರಿಲ್ಲದವರು, ಹೆಸರೊಲ್ಲದವರು. ಅವರು ಹುಟ್ಟಿದ್ದೆಲ್ಲಿ, ಬೆಳೆದಿದ್ದೆಲ್ಲಿ, ತಂದೆತಾಯಿಗಳಾರು, ಅವರ ಸಾಧನೆ ಹೇಗಾಯಿತು ಎಂಬುದರ ಬಗ್ಗೆ ಯಾರಿಗೂ ಏನೂ ತಿಳಿಯದು. ಓದು ಬರಹ ಬಲ್ಲವರಲ್ಲ, 'ಯೋಗ' ಎಂದೂ ಸಹ ಉಚ್ಚರಿಸಲಾರದವರು. ಆದರೆ ಶ್ರೇಷ್ಠ ಯೋಗಿಯಾಗಿದ್ದರು. ಸಾಮಾನ್ಯರಲ್ಲಿ ಸಾಮಾನ್ಯರಾಗಿ , ಮುಗ್ಧರಲ್ಲಿ ಮುಗ್ಧರಾಗಿ, ಮಕ್ಕಳೊಡನೆ ಮಕ್ಕಳಾಗಿ ಬೆರೆತವರು. ಅಹಂಕಾರವನ್ನು ಸಂಪೂರ್ಣವಾಗಿ ನಿರಸನಗೊಳಿಸಿದವರು. ತನ್ನತನವನ್ನು ಇಲ್ಲಗೈದವರು. ಹಳ್ಳಿಗಾಡಿನ ಮುಗ್ಧರೊಡನೆ ಬೆರೆತು, ಅವರವರ ಅರಿವಿನ ಮಟ್ಟದಲ್ಲಿಯೇ ತಿಳಿಹೇಳಿ ಅವರನ್ನು ಭಗವದಭಿಮುಖಗೊಳಿಸಿದವರು. ಸಿದ್ಧಿಗಳು ಕೈವಶವಾಗಿದ್ದರೂ ಅವುಗಳನ್ನು ಪ್ರದರ್ಶನಕ್ಕಾಗಿ ಬಳಸದೆ ಸಿದ್ಧಪುರುಷರಾದವರು. ನಮ್ಮೀ ನಾಡಿನ ಆಧ್ಯಾತ್ಮಿಕ ಬದುಕಿನಲ್ಲಿ ಧ್ರುವತಾರೆಯಾಗಿ ಉಳಿದವರು.

**ಲೋಕದ ಕಣ್ಣಿಗೆ ಅಗೋಚರವಾಗಿ 'ವನಸುಮ'ದಂತೆ ಬಾಳಿದ ಶ್ರೇಷ್ಠ ಯೋಗಿಯೊಬ್ಬರ ಪರಿಚಯವನ್ನು ಮಾಡಿಕೊಟ್ಟಿದ್ದಾರೆ, ಶ್ರೀ ಡಿ.ಕೆ. ಈರೇಗೌಡ ಅವರು. ಇವರು ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿದ ಪ್ರಸಾರಾಂಗದ ಉಪನಿರ್ದೇಶಕರಾಗಿದ್ದಾರೆ.**

ನಾವು ನೀವು ಕೂಡಿಕೊಂಡು
ಮಕ್ಕಳ ಮರಿ ಕರೆದುಕೊಂಡು
ಮುಕುಂದೂರಯ್ಯನ ಗಿರಿಗೆ
ಹೋಗೋಣ ಬರ್‍ರಿರೇನ್ರಿ
ಇಲ್ಲೆ ಇರ್‍ತಿರೇನ್ರಿ

ಮುಕುಂದೂರು ಸ್ವಾಮಿಗಳು ಹಾಡುತ್ತಿದ್ದ ಪದ

ಮುಕುಂದೂರು ಹಾಸನಜಿಲ್ಲೆಯ ಹೊಳೆನರಸೀಪುರದ ತಾಲ್ಲೂಕಿನಲ್ಲಿರುವ ಒಂದು ಹಳ್ಳಿ. ಆ ಹಳ್ಳಿಯ ಹತ್ತಿರದಲ್ಲೆ ಒಂದು ಬೆಟ್ಟವಿದೆ. ಅದನ್ನು ಮುಕುಂದೂರು ಬೆಟ್ಟ ಎಂದು ಕರೆಯುತ್ತಾರೆ. ಬೆಟ್ಟದ ಮೇಲೆ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನವಿದೆ. ಅಲ್ಲಿ ಹಿಂದೆ ಸಮೃದ್ಧವಾದ ಕಾಡಿದ್ದು, ಬೆಟ್ಟದ ತಪ್ಪಲಿನಲ್ಲಿ ಗುಹೆಗಳಿದ್ದು ತಪಸ್ಸಿಗೆ ಪ್ರಶಸ್ತ ಸ್ಥಳವಾಗಿದ್ದಿರಬೇಕು. ಸ್ವಾಮಿಗಳು ಅಲ್ಲಿಯೇ ತಮ್ಮ ಸಾಧನೆಯನ್ನು ನಡೆಸಿರಬಹುದು. ಇವರು ಮುಕುಂದೂರು ಬೆಟ್ಟದ ಮೇಲಿದ್ದಿದ್ದರಿಂದ ಇವರನ್ನು ಜನರು ಮುಕುಂದೂರು ಸ್ವಾಮಿಗಳು ಎಂದು ಕರೆದಿರಬಹುದು. ಸ್ವಾಮಿಗಳು ಕರೆದಿರುವರೆಂದು ಸುತ್ತಮುತ್ತಲ ಹಳ್ಳಿಯ ಜನರೆಲ್ಲ ಬೆಟ್ಟಕ್ಕೆ ಬಂದು ಸ್ವಾಮಿಗಳನ್ನು ಹುಡುಕಿದರೆ, ಸ್ವಾಮಿಗಳೇ ನಾಪತ್ತೆ. ಕೊನೆಗೆ ತಾವು ತಂದಿದ್ದ ಅಕ್ಕಿ, ಬೇಳೆ, ಬೆಲ್ಲ ಇತ್ಯಾದಿ ಪದಾರ್ಥಗಳಿಂದ ಅಡುಗೆ ಮಾಡಿ ಇನ್ನೇನು ಊಟಕ್ಕೆ ಏಳಬೇಕು ಎನ್ನುವ ವೇಳೆಗೆ ಸ್ವಾಮಿಗಳು ಅಲ್ಲಿ ಪ್ರತ್ಯಕ್ಷ. ಬಂದವರೇ 'ಇವನಿಗೂ ಒಂದಿಷ್ಟು ಕವಳ ಕೊಡ್ರಲಾ', ಎಂದು ಕೈ ಒಡ್ಡಿ ಅವರ ಮಧ್ಯೆ ಬೆರೆತು ಎಲ್ಲರನ್ನೂ ಸಂತೋಷಪಡಿಸುವುದು ಇವರ ಜಾಯಮಾನ. ರಾತ್ರಿಯೆಲ್ಲಾ ಭಜನೆ. ಹಳ್ಳಿಯ ಜನರಿಗೆ ಅರ್ಥವಾಗುವಂತೆ ಆಧ್ಯಾತ್ಮಿಕ ಜೀವನದ ಬಗ್ಗೆ ತಿಳಿಹೇಳುವುದು. ಈಗಲೂ ಪ್ರತಿ ಹುಣ್ಣಿಮೆಯ ದಿನದ ರಾತ್ರಿ ಹಳ್ಳಿಯ ಜನರೆಲ್ಲ ಸೇರಿ ಅಲ್ಲಿಯೆ ಅಡುಗೆ ಮಾಡಿ ಊಟ ಮಾಡಿ ರಾತ್ರಿಯೆಲ್ಲಾ ಭಜನೆ ಮಾಡುವುದು ಆ ಸುತ್ತಮುತ್ತಲ ಪ್ರದೇಶದಲ್ಲಿ ರೂಢಿಯಲ್ಲಿದೆ. ಇದನ್ನು 'ಹುಣ್ಣಿಮೆಕಟ್ಟೆ' ಎಂದು ಕರೆಯುತ್ತಾರೆ. ಬಹುಶಃ ಮುಕುಂದೂರು ಸ್ವಾಮಿಗಳೆ ಇದನ್ನು ರೂಢಿಗೆ ತಂದಿದ್ದಿರಬಹುದು.

## ಮುಕುಂದೂರಿನ ಅಂತರಾರ್ಥ

ಅಧ್ಯಾತ್ಮದ ಗಹನ ವಿಚಾರಗಳನ್ನು ತುಂಬ ಸರಳವಾಗಿ ಸಾಮಾನ್ಯರಿಗೂ ಅರ್ಥವಾಗುವಂತೆ ಹೇಳುವುದು ಸ್ವಾಮಿಗಳ ವೈಶಿಷ್ಟ್ಯ: 'ಈಗ ಮುಕುಂದೂರು ಸ್ವಾಮಿ ಅಂತ ಒಂದು ಮಾತೈತೆ. ಅದರ ಮರ್ಮ ತಿಳ್ಕಂಡ್ರೆ ಅದನ್ನು ವೇದಾಂತ ಅಂತಾರೆ. ಮುಕುಂದ ಅಂದರೆ ಮೂರು ಕುಂಡಗಳು. ಅಂದ್ರೆ ಮೂರು ಸ್ವಾರೆಗಳು. ನಿಜ. ಈ ಮೂರು ಸ್ವಾರೆಗಳು ಸೇರಿ ಕಣ್ಣು, ಕಿವಿ, ಮೂಗು, ಕೈಕಾಲು ಇರೋ ಊರು ಮುಕುಂದೂರು. ಒಂದು ಸ್ಥೂಲ, ಒಂದು ಸೂಕ್ಷ್ಮ, ಇನ್ನೊಂದು ಕಾರಣ—ಒಟ್ಟು ಮೂರು. ಈ ಮೂರರ ಒಳಗೆ ಯಾರಿಗೂ ಕಾಣ್ದೋನು ಇನ್ನೊಬ್ಬ

ಇದಾನೆ. ಅವನೇ ಸ್ವಾಮಿ. ಅಲ್ಲಿಗೆ ಮುಕುಂದೂರು ಸ್ವಾಮಿ ಆಯ್ತು. ಇದರಂತೆ ನೋಡಿದರೆ ಎಲ್ಲರೂ ಮುಕುಂದೂರು ಸ್ವಾಮಿಗಳೆ. (ನಕ್ಕು) ಸ್ಥೂಲ ಶರೀರ ಎಂದರೆ ಕೈಕಾಲು, ಕಣ್ಣು, ಮೂಗು ಒಟ್ಟು ಹೊರಗಿನ ಸಿಪ್ಪೆ. ಇದು ಎಲ್ಲರಿಗೂ ಗೊತ್ತು. ಅಂಗೇ ಸೂಕ್ಷ್ಮ ಶರೀರ ಅಂದ್ರೆ ಈ ಸ್ಥೂಲ ಶರೀರದ ಒಳಗೆ ಇದ್ದು ಇದನ್ನು ಆಟ ಆಡಿಸೋ ಮನಸ್ಸು ಬುದ್ಧಿ ಇಂಥಾದ್ದು. ಇದು ಎಲ್ಲರಿಗೂ ಗೊತ್ತುಂಟು. ಇದರ ಲಗಾಮೆಲ್ಲ ಹಿಡ್ಕೊಂಡು ಆಟ ಆಡಿಸಬೇಕು. ಅಂದ್ರೆ ಇದರೊಳಗೆ ಇನ್ನೇನೊ ಒಂದು ಕರೆಂಟ್ ಇರಬೇಕು. ಅದೇ ಕಾರಣ ಶರೀರ. ಇದು ಎಲ್ಲರಿಗೂ ಉಂಟು. ಅಲ್ಲಿಗೆ ಇವೆಲ್ಲ ಒಂದು ಕಡೆ ಸೇರಿ ಊರಾಯ್ತು. ಅದೇ ಮುಕುಂದೂರು. ಇದೆಲ್ಲದರ ಒಳಗೂ ಹೂರಗೂ ತಾನೇತಾನಾಗಿ ದಿಕ್ಕು, ದೆಸೆ, ಕೊನೆ, ಮೊದ್ಲು ಇಲ್ದಂಗೆ ಅವರಿಸಿಕೊಂಡಿರೋ ಇನ್ನೂ ದೊಡ್ಡ ಕರೆಂಟ್ ಒಂದೈತೆ. ಅದೇ ಶಿವ. ಆ ಕರೆಂಟು ಶಿವ ಸಮುದ್ರದ್ದು. ಎಲ್ಲೆಲ್ಲೂ ಇರೋದು, ಎಲ್ಲಾ ಆಗಿರೋದು– ಅದೇ ಸ್ವಾಮಿ. ಅಲ್ಲಿಗೆ ನೀವೆಲ್ಲ ಮುಕುಂದೂರು ಸ್ವಾಮಿಗಳೇ ಆದಿರಿ. ಅಂದ್ಮೇಲೆ ಏನ್ಮಾಡ್ಬೇಕು? ಈ ಮೂರು ಕುಂಡಗಳಾಗೆ ಒಳ್ಳೊಳ್ಳೆ ಹೂವು, ಹಣ್ಣು ಬಿಡೋ ಸಸಿಗಳನ್ನು ಬೆಳೆಸಬೇಕು. ಅಂದ್ರೆ ಒಳ್ಳೊಳ್ಳೆ ಕೆಲ್ಸ ಮಾಡಬೇಕು. ಅಂಗಂದ್ರೆ ಸ್ಥೂಲ ಶರೀರ ಕಷ್ಟಮಾಡಿ ದುಡಿಬೇಕು. ಮನಸ್ಸು ಒಳ್ಳೊಳ್ಳೆ ಯೋಚ್ನೆ ಮಾಡಬೇಕು. ಕಾರಣಶರೀರ ಅದೆಲ್ಲದರ ಆನಂದ ಅನುಭವಿ ಸುತ್ತೆ. (ನಗುತ್ತಾ ತಮ್ಮ ಶರೀರವನ್ನು ತೋರಿಸಿ) ಈ ಮುಕುಂದೂರನ್ನು ಚೆನ್ನಾಗಿ ರೂಢಿಸಿಕೊಂಡ್ರೆ ಮಾದರಿ ಗ್ರಾಮ ಅಂತ ಕರೀತಾರೆ ನೋಡಿ ಸರ್ಕಾರದೋರು. ಅಂಗೆ ಇದು ಮಾದರಿ ಗ್ರಾಮ ಆಗೋ ರೀತಿ ನಡ್ಕೋಬೇಕು. ಒಟ್ಟಿಗೆ ಚೆನ್ನಾಗಿ ದುಡೀರಿ, ಚೆನ್ನಾಗಿ ಬೆಳೀರಿ, ಚೆನ್ನಾಗಿ ಕೈ ಎತ್ತಿ ದಾನ ಧರ್ಮ ಮಾಡಿ. ಬಂಧು-ಬಳಗ , ಅಣ್ಣ, ಅಪ್ಪ, ಅವ್ವ, ಅಕ್ಕ ಅಂತ ಒಳ್ಳೆ ಮಾತಾಡಿಕೊಂಡು ಸಂತೋಷವಾಗಿ ಕಾಲ ಕಳೀರಿ... (ನಕ್ಕು) ಇನ್ನು ಮಾತು ಸಾಕು. ಏಳ್ರಿ ಶಿವ ಶಿವ ಅಂತ ಪ್ರಸಾದ ತಕ್ಕೊಳ್ಳಿ...' ಇದು ಧರ್ಮದ ತಿರುಳನ್ನು ಸಾಮಾನ್ಯರಿಗೆ ಉಣಬಡಿಸುವ ಸ್ವಾಮಿಗಳ ವಿಧಾನ!

## ಸೃಷ್ಟಿಯ ಗುಟ್ಟು

ಪ್ರಕೃತಿಯ ವೈವಿಧ್ಯಮಯ ಸೌಂದರ್ಯ ಸವಿಯುತ್ತಾ ಸೃಷ್ಟಿಯ ರಹಸ್ಯವನ್ನು ಭೇದಿಸುವ ಬಗೆಯನ್ನು ನೋಡಿ : ಎರಡು ಬಂಡೆಗಳ ನಡುವೆ ಕಿರಿದಾಗಿ ಧುಮ್ಮಿಕ್ಕಿ ಹರಿಯುತ್ತಿದ್ದ ನೀರಿನ ಝರಿಯನ್ನೇ ನೋಡುತ್ತಾ, 'ನೋಡಪ್ಪ, ತಮಾಷೆ ಎಂಗೈಯ್ತೇ! ನೀರೇ ಅದರಷ್ಟಕ್ಕದು ಹರಿದು ಹೋಗುತ್ತೆ. ಆ ಗುಳ್ಳೆಗಳು ಎಷ್ಟೊಂದು ಬಂದ್ವು ಇಲ್ಲಿ! ಅಂಗೆ ಮುಂದೆ ನಡೀತವ. ಆಗೋ ಅಲ್‌ನೋಡು, ಅಲ್ಲಿಗೋಗೋ ಹೊತ್ಗೆ ಒಂದೂ ಇಲ್ಲ. ಇಲ್ಲಿ ಹುಟ್ಟಿದ್ದ್ಯಾಕೆ? ಅಲ್ಲಿಗಂಟ ಹೋಗೋದ್ಯಾಕೆ? ಅಲ್ಲಿ ಒಂದೂ ಇಲ್ದಂಗೆ ಹೋಗಿದ್ದೆಲ್ಲಿಗೆ? (ನಗುತ್ತ) ಇದೊಳ್ಳೆ ಚೆನ್ನಾಗೈತೆ ! ಹುಟ್ಟಿದ್ದೆಲ್ಲಿಂದ? ಅಲ್ಲೀಗಂಟ ನಡೆದಿದ್ದು ಯಾವುದ್ರಾಗೆ? ಒಂದೂ ಇಲ್ದಂಗೆ ಹೋಗಿದ್ದೆಲ್ಲಿಗೆ?... ಹುಟ್ಟಿದ್ದ್ಯಾವ್ದು, ನಡಿದಿದ್ದ್ಯಾವ್ದು, ಹೋದದ್ಯಾವ್ದು? ಎಲ್ಲ ನೀರೇ! ಇಂಗೇ ಅಲ್ವೇ ಯಾಕೋ ಏನೋ ಹುಟ್ಕೋಳ್ದು, ಅದರ ಸೆಳವಿನಾಗೇ ಅಷ್ಟುದೂರ ಹೋಗೋದು, ಮತ್ತದರಾಗೆ ಕಾಣ್‌ದಂಗಾಗೋದು. ಇದೇ ಅಲ್ವೇ ಕೌತುಕ! ಯಾವ್ದೂ ಇಷ್ಟೇ. ಅಂತೂ ಕೌತುಕ ಅಂದ್ರೆ ಕೌತುಕ — ಇಲ್ಲಾಂದ್ರೆ ಏನೂ ಇಲ್ಲ... '

## ಗೀತಾತತ್ತ್ವ

ಸ್ವಾಮಿಗಳು ಗೀತೆಯನ್ನು ವ್ಯಾಖ್ಯಾನಿಸುವ ರೀತಿ ಗಮನಿಸಬಹುದು: ಲೋಕಹಿತವೇ ಧರ್ಮ. ಧರ್ಮದ ಉಳಿವಿಗಾಗಿ ಕರ್ಮ. ನಿಷ್ಕಾಮದಲ್ಲಿ ತಾನಿಲ್ಲ. ಆದ್ದರಿಂದ ಕರ್ಮ ನನಗೆ ಅಂಟುವುದಿಲ್ಲ. ಅದು ಅಕರ್ಮ. ಕರ್ಮ ಅಂಟುವುದಿಲ್ಲ ಎಂದು ಸುಮ್ಮನೆ ಇರಕೂಡದು. ಅದು ಬೇಜವಾಬ್ದಾರಿ, ಸೋಮಾರಿತನ ಆಗುತ್ತೆ. ರಾಜ್ಯದ ಆಸೆ ಬೇಡ ಎಂದರೆ ಧರ್ಮ ಉಳಿಯುವುದು ಬೇಡವೆ? ಧರ್ಮ ಉಳೀಬೇಕು ಅಂದರೆ ಅಧರ್ಮವನ್ನು ಹೊಡೆದುಹಾಕಬೇಕಲ್ಲಾ? ಇದೆಲ್ಲಾ ಬಿಟ್ಟು ನನಗ್ಯಾಕೆ ಅಂದರೆ ಅದು ನಿಷ್ಕರ್ಮ ಆಗುತ್ತೆ. ಆಗ ಅದು ದುಷ್ಕರ್ಮವೂ ಆದೀತು. ಆದ್ದರಿಂದ ಲೋಕಹಿತಕ್ಕಾಗಿ ದುಷ್ಟತನವನ್ನು ಹೊಡೆದು ಹಾಕಬೇಕು. ಅದರಿಂದ ಪಾಪಲೇಪನವಿಲ್ಲ.

## ನಿರಕ್ಷರನಿಗೆ ಅಕ್ಷರಪ್ರಾಪ್ತಿ

ಅರಸೀಕೆರೆಯಿಂದ ಬಾಣಾವರಕ್ಕೆ ರೈಲು ರಸ್ತೆ ನಡೆಯುತ್ತಿದ್ದ ಸಂದರ್ಭದಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಒಬ್ಬ ನಿರಕ್ಷರಕುಕ್ಷಿ, ಸಾಧನೆಯಿಂದ ಯಾವ ಹಂತಕ್ಕೆ ಏರಬಹುದು, ಭಗವದ್ ಸಾಕ್ಷಾತ್ಕಾರ ಪಡೆದುಕೊಳ್ಳಬಹುದು ಎಂಬುದಕ್ಕೆ ಮುಕುಂದೂರು ಸ್ವಾಮಿಗಳೇ ಸಾಕ್ಷಿ. ಅವರು ದೇಹಬಿಡುವ ವೇಳೆಗೆ(೧೯೬೬) ಅವರಿಗೆ ಸುಮಾರು ನೂರನಲವತ್ತು ವರ್ಷಗಳಾಗಿರಬೇಕೆಂದು ಹೇಳುತ್ತಾರೆ. ಭಕ್ತಿ, ಜ್ಞಾನ, ವೈರಾಗ್ಯಗಳ ತವನಿಧಿಯಾಗಿದ್ದ ಸ್ವಾಮಿಗಳು ಎಲ್ಲೂ ತಮ್ಮತನವನ್ನು ಪ್ರದರ್ಶಿಸದೆ, ಮಠಮಂದಿರಗಳನ್ನು ಕಟ್ಟದೆ ಸಾಮಾನ್ಯರಲ್ಲಿ ಸಾಮಾನ್ಯನಾಗಿ ಮುಗ್ಧ ಹಳ್ಳಿಗರೊಂದಿಗೆ ಬೆರೆತು, ಅತ್ಯಂತ ಸರಳವಾದ ಭಾಷೆಯಲ್ಲಿ ಧರ್ಮದ ಗಹನ ವಿಚಾರಗಳನ್ನು ತಿಳಿಹೇಳುತ್ತಾ—ಜನರ ಮನಸ್ಸನ್ನು ಭಗವಂತನ ಕಡೆ ಒಲೆಯುವಂತೆ ಮಾಡಿ, ಶಾಂತಿ ನೆಮ್ಮದಿಯಿಂದ ಈ ಭೂಮಿಯ ಮೇಲೆ ಬದುಕುವ ಕಲೆಯನ್ನು ಕಲಿಸಿದ ಮಹಾಪುರುಷರು. ಇಂಥವರನ್ನು ಅರಿಯುವುದಿರಲಿ ನೆನೆಯುವುದೇ ನಮ್ಮ ಬಾಳಿಗೊಂದು ದಾರಿದೀಪವಿದ್ದಂತೆ.

ಆಧಾರಗ್ರಂಥ : ಬೆಳಗೆರೆ ಕೃಷ್ಣಶಾಸ್ತ್ರೀಯವರ ಯೇಗ್ದಾಗೆಲ್ಲಾ ಐತೆ.

ಒಂದು ದಿನ ಒಂದು ಶಿಲ್ಪದ ವಿಗ್ರಹ ಹಾಗೂ ನೆಲದ ಮೇಲೆ ಹಾಸಿದ ಕಲ್ಲು ಚಪ್ಪಡಿ ಪರಸ್ಪರ ಮಾತನಾಡಿಕೊಳ್ಳುತ್ತಿದ್ದವು. ಕಲ್ಲುಚಪ್ಪಡಿ ಹೇಳಿತು : 'ನೋಡು, ನಾವಿಬ್ಬರೂ ಒಂದೇ ಕಲ್ಲುಗಳು. ಆದರೆ ನಿನ್ನನ್ನು ಜನರು ಬಹಳ ಪೂಜಿಸುತ್ತಾರೆ. ನನ್ನನ್ನು ತುಳಿಯುತ್ತಾರೆ.' ಆಗ ಆ ವಿಗ್ರಹ ಹೇಳಿತು, 'ನನ್ನನ್ನು ವಿಗ್ರಹವಾಗಿ ಮಾಡುವಾಗ ಶಿಲ್ಪಿ ಹಾಕಿದ ಎಲ್ಲ ಹೊಡೆತಗಳನ್ನೂ ಸುಮ್ಮನೆ ಸಹಿಸಿದ್ದೇನೆ' ಎಂದು.

ಈ ಜೀವನದಲ್ಲಿ [illegible] ಸಮಾಜದಲ್ಲಿ [illegible] ಇಲ್ಲಿ ಸ್ಮರಿಸಿಕೊಳ್ಳಬಹುದು.